**O.S. 369-19 PW : 1**

**ಸತ್ಯ ಪ್ರತಿಜ್ಞೆ ಮೇರೆಗೆ ದಿನಾಂಕಃ 30.11.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ L V M, ವಕೀಲರಿಂದಃ**

10. ನಮ್ಮ ತಂಗಿ ಎಷ್ಟು ಹಣ ಕೊಟ್ಟು ದಾವಾ ಆಸ್ತಿ ಕ್ರಮಸಂಖ್ಯೆ 4 ಡಿ ನ್ನು ಖರೀದಿ ಮಾಡಿದ್ದರು ಎಂದು ಅವರಿಗೆ ಗೊತ್ತು, ನನಗೆ ಗೊತ್ತಿಲ್ಲ. ನಮ್ಮ ತಂಗಿ ಖರೀದಿ ಮಾಡಿದ ಆಸ್ತಿ ನಮ್ಮ ತಾಯಿಯದು ಎಂದು ಹೇಳಿರುತ್ತೇವೆ. ನಮ್ಮ ತಂಗಿ ಖರೀದಿ ಮಾಡಿದ ಸದರಿ ಆಸ್ತಿಯನ್ನು ದಾವೆಯಲ್ಲಿ ಸೇರಿಸಿಲ್ಲ. ನಮ್ಮ ತಂಗಿ ಹಿಡಿದ ಆಸ್ತಿ ಸೇರಿಸಿ ಎಲ್ಲಾ ಆಸ್ತಿಗಳು ನಮ್ಮ ತಂದೆಯ ಸ್ವಯಾರ್ಜಿತ ಆಸ್ತಿಗಳು ಎಂಬ ವಕೀಲರ ಪ್ರಶ್ನೆಗೆ ನನ್ನ ತಾಯಿಯ ಆಸ್ತಿ ಮಾರಾಟ ಮಾಡಿ ಖರೀದಿ ಮಾಡಿರುತ್ತಾರೆ ಎಂದು ಹೇಳುತ್ತಾರೆ. ನಮ್ಮ ತಾಯಿಯ ಹೊಲ ನವಲಗುಂದ ತಾಲ್ಲೂಕಿನ ಬೆಳವಟಗಿ ಗ್ರಾಮದಲ್ಲಿರುವುದನ್ನು ಮಾರಾಟ ಮಾಡಿದ್ದರು.

11. ದಾವಾ ಆಸ್ತಿ ಕ್ರಮ ಸಂಖ್ಯೆಃ ಎಫ್ ಇದರಲ್ಲಿ ಏನು ನಮೂದು ಮಾಡಿದ್ದೀರಿ ಅಂದರೆ ನನಗೆ ಹೇಳಲು ಬರುವುದಿಲ್ಲ, ತೋರಿಸಿದರೆ ಹೇಳುತ್ತೇನೆಂದು ಹೇಳುತ್ತಾರೆ.

ದಾವಾ ಆಸ್ತಿಯ ಬಗ್ಗೆ ಮಾಹಿತಿ ಇಲ್ಲ ಅಂದರೆ ಸರಿಯಲ್ಲ. ನಮ್ಮ ತಂದೆಯ ಎಸ್ ಬಿ ಖಾತೆ ಇದೆ. ಎಷ್ಟು ಅಕೌಂಟ ಇವೆ ಗೊತ್ತಿಲ್ಲ. ಅಕೌಂಟ ನಂಬರ ಗೊತ್ತಿಲ್ಲ. ಅದರಲ್ಲಿ ಎಷ್ಟು ಹಣ ಇವೆ ಗೊತ್ತಿಲ್ಲ. ಬ್ಯಾಂಕಿಗೆ ಸಂಬಂಧಪಟ್ಟಂತೆ ಅಕೌಂಟ ಇದೆ, ಹಣ ಇದೆ ಅಂತಾ ಹೇಳಿದರು, ಅದನ್ನು ಬಿಟ್ಟು ಬೇರೆ ಹೇಳಿಲ್ಲ. ನವನಗರದ ಶಾಖೆಯಲ್ಲಿ ಎಸ್ ಬಿ ಖಾತೆ ಇತ್ತು. ನಮ್ಮ ತಂದೆ ಬ್ಯಾಂಕಿನಲ್ಲಿ ಹಣ ಇಟ್ಟ ಬಗ್ಗೆ ನನ್ನ ಮುಂದೆ ಹೇಳಿಲ್ಲ ಅಂದರೆ ಸರಿಯಲ್ಲ. ನಮ್ಮ ತಂದೆ ಮರಣ ಹೊಂದುವಾಗ ಬ್ಯಾಂಕಿನಲ್ಲಿ ಹಣ ಎಫ್ ಡಿ ಇಟ್ಟಿರಲಿಲ್ಲ ಅಂದರೆ ಸರಿಯಲ್ಲ. ನನ್ನ ಖಾಯಂ ವಿಳಾಸ C/o. A S Benni, Opp. I C S College, Basavanagar, Haliyal Road, Dharwad ಅಂತಾ ಹೇಳಿದ್ದೇನೆ ಅಂದರೆ ಸರಿ. ಇದು ಭಾಡಿಗೆ ಮನೆ. ಈಗ ಸ್ವಂತ 8 ತಿಂಗಳ ಹಿಂದೆ ಮನೆ ಗೃಹ ಪ್ರವೇಶ ಮಾಡಿರುತ್ತೇವೆ. ಸ್ವಂತ ಮನೆ ಬಸವನಗರದ ಬಳಿ ಇದೆ. ನಾನು 15 ವರ್ಷಗಳಿಂದ ಧಾರವಾಡದಲ್ಲಿದ್ದೇನೆ. ಬಸವನಗರದ ಸುತ್ತಮುತ್ತ ಬೇರೆ ಬೇರೆ ಭಾಡಿಗೆ ಮನೆಯಲ್ಲಿದ್ದೆನು. ನನ್ನ ಗಂಡ ಕ್ಯಾಂಟಿನ್ ನಡೆಸುತ್ತಾರೆ. ಡಿ ಸಿ ಕಚೇರಿ ಬಳಿ ಇರುವ ಕ್ಯಾಂಟಿನ್ ನಮ್ಮದು ಅಂದರೆ ಸರಿ, ಭಾಡಿಗೆ ಕಟ್ಟಡದಲ್ಲಿ ಕ್ಯಾಂಟಿನ್ ನಡೆಸುತ್ತೇವೆ.

15 -20 ವರ್ಷ ನಡೆಸಿರುತ್ತೇವೆ. ನಾನು ನನ್ನ ಗಂಡ ಜೊತೆ ಕ್ಯಾಂಟಿನ್ ದಲ್ಲಿ ಕೆಲಸಕ್ಕೆ ಹೋಗಿಲ್ಲ. ವಾದಿ ನಂಃ 2 ಸರಕಾರಿ ಶಿಕ್ಷಕಿ. ನನಗೆ 3 ಜನ ಮಕ್ಕಳು. ಇಬ್ಬರು ಹೆಣ್ಣು ಮಕ್ಕಳು ಗಂಡನ ಮನೆಯಲ್ಲಿದ್ದಾರೆ, ಒಬ್ಬ ಮಗನಿದ್ದಾನೆ. ವಾದಿ ನಂಃ 2 ರವರಿಗೆ ಒಂದು ಹೆಣ್ಣು ಮಗುವಿದೆ. ನನಗೆ ನನ್ನ ಕುಟುಂಬ ಜವಾಬ್ದಾರಿ ಹಾಗೂ ನನ್ನ ತಂಗಿಗೆ ಅವರ ಕುಟುಂಬದ ಜವಾಬ್ದಾರಿ ಇರುವುದರಿಂದ ತವರು ಮನೆಗೆ ಯಾವಾಗದಾರೊಮ್ಮೆ ಹೋಗುತ್ತಿದ್ದೆವು.

12. ನಮ್ಮ ತಾಯಿ ದಿಃ 23.11.2014 ರಲ್ಲಿ ಮರಣ ಹೊಂದಿರುತ್ತಾರೆ. ನಮ್ಮ ತಾಯಿ ಮರಣದ ದಿನಾಂಕ ಸರಿಯಾಗಿ ಗೊತ್ತಿಲ್ಲ, ಅವರು ಮರಣ ಹೊಂದಿದ್ದು 2016 ರಲ್ಲಿ ಅಂದರೆ ಸರಿ. ನಮ್ಮ ತಾಯಿ ಮರಣ ಹೊಂದಿದಾಗ ಅವರ ವಯಸ್ಸು 60 – 62 ಇತ್ತು. ನಮ್ಮ ತಾಯಿಗೆ ಸಿದ್ದಾರ್ಥ ನ ಮಕ್ಕಳ ಮೇಲೆ ಪ್ರೀತಿ ಇತ್ತು. ಅವರು ಪ್ರತಿವಾದಿ 4 ಹಾಗೂ 5 ಇರುತ್ತಾರೆ. ನಮ್ಮ ತಾಯಿ ಮರಣ ಹೊಂದವದಕ್ಕಿಂತ ಮುಂಚೆ ಸಿದ್ದಾರ್ಥನ ಮನೆಯಲ್ಲಿದ್ದಳು. ವಾದ ಪತ್ರದ ಪ್ಯಾರಾ ನಂಃ 6 ರಲ್ಲಿ ನಮ್ಮ ತಾಯಿ ನಮ್ಮ ಜೊತೆ ಇರುತ್ತಾರೆಂದು ಸುಳ್ಳು ಹೇಳಿರುತ್ತೇವೆ ಅಂದರೆ ನಮ್ಮ ಬಳಿ ಬಂದು ಹೋಗುತ್ತಿದ್ದಳೆಂದು ಉತ್ತರಿಸುತ್ತಾಳೆ. ನಮ್ಮ ತಾಯಿಗೆ ಪಾರ್ಶುವಾಯು ಕಾಯಿಲೆ ಆಗಿದ್ದರಿಂದ ಮರಣ ಹೊಂದಿದರು. ಮೊದಲನೇ ಬಾರಿಗೆ ನಮ್ಮ ತಾಯಿಗೆ ಪಾರ್ಶುವಾಯು ಯಾವಾಗ ಆಯಿತು ಅಂತಾ ದಿನಾಂಕ ಗೊತ್ತಿಲ್ಲ. 2015 ಅಂದರೆ ನೆನಪಿಲ್ಲ. ನಮ್ಮ ತಾಯಿಗೆ ಬಲಗಡೆ ಭಾಗ ಸ್ವಾಧೀನ ಕಳೆದುಕೊಂಡಿದ್ದರು. ನಮ್ಮ ತಾಯಿಗೆ ಜನವರಿ 2015 ರಲ್ಲಿ ಪಾರ್ಶುವಾಯು ಆಯಿತು ಅಂದರೆ ಸರಿ. ನಮ್ಮ ತಾಯಿಗೆ ಪಾರ್ಶುವಾಯು ಆಗಿ 2 ರಿಂದ 2 ವರೆ ವರ್ಷದ ನಂತರ ಅವರು ಮರಣ ಹೊಂದಿದರು ಅಂದರೆ ಸರಿ. ನಮ್ಮ ತಾಯಿುಗೆ ಬಲಗಡೆಗೆ ಪಾರ್ಶುವಾಯು ಆಗಿದ್ದರಿಂದ ಮಾನಸಿಕವಾಗಿ ಚೆನ್ನಾಗಿದ್ದರು ಅಂದರೆ ನನಗೆ ಹೇಳಲಾಗುವುದಿಲ್ಲ. ನಮ್ಮ ತಾಯಿಗೆ ಕಾಯಿಲೆ ಬಂದಾಗ ನಾನು ಹಾಗೂ ನಮ್ಮ ತಂಗಿ ಹೋಗಿ ಸೇವೆ ಮಾಡಿದ್ದೇವೆ. ನಮ್ಮ ತಾಯಿಗೆ ದಿನಾಲು ಸಿದ್ದಾರ್ಥ ಹಾಗೂ ಅವರ ಹೆಂಡತಿ ನರ್ಸ ಇಟ್ಟುಕೊಂಡು ಆರೈಕೆ ಮಾಡುತ್ತಿದ್ದರು ಅಂದರೆ ಸರಿ. ನಾವು ಆರೈಕೆ ಮಾಡಲು ಹೋದಾಗ 1 – 2 ದಿನ ಇದ್ದು, ಬರುತ್ತಿದ್ದೆವು ಅಂದರೆ ಸರಿ. ನಾವು ಹೋದಾಗ ನಮ್ಮ ತಾಯಿಗೆ ಮಾತನಾಡಲು ಬರುತ್ತಿರಲಿಲ್ಲ. ಕೈ ಸನ್ನೆ - ಬಾಯಿಸೊನ್ನೆ ಮಾಡಿ ಏನು ಹೇಳಿಲ್ಲ, ಅವರಿಗೆ ಏನು ಗೊತ್ತಾಗುತ್ತಿರಲಿಲ್ಲ. ಯಾವ ಡಾಕ್ಟರ ನಮ್ಮ ತಾಯಿಗೆ ಲೋದ ಪರಿಜ್ಞಾನ ಇರಲಿಲ್ಲ ಅಂತಾ ಹೇಳಿರಲಿಲ್ಲ ದಾಖಲೆ ಕೊಟ್ಟಿಲ್ಲ.

ನಮ್ಮ ತಾಯಿ ನಾನು ಹೇಳಿದ ಪ್ರಕಾರ ಮೊಮ್ಮಕ್ಕಳ ಮೇಲಿನ ಪ್ರೀತಿಯಿಂದಾಗಿ ತಮ್ಮ ಆಸ್ತಿಗಳನ್ನು ದಿಃ 24.11.2014 ರಂದು ಬಕ್ಷಿಸ ಪತ್ರ ಮಾಡಿಕೊಟ್ಟಿರುತ್ತಾರೆ ಅಂದರೆ ಅವರಿಗೆ ಓದಲು -ಬರೆಯಲು ಬರುತ್ತಿರಲಿಲ್ಲ, ಹೆಬ್ಬೆಟ್ಟು ಹಾಕಿಸಿಕೊಂಡಿರುತ್ತಾರೆಂದು ಹೇಳುತ್ತಾರೆ. ಬಕ್ಷಿಸ ಪತ್ರ ನೋಂದಣಿ ಅಧಿಕಾರಿಗಳು ಬಂದು ನೋಂದಣಿ ಮಾಡಿರುತ್ತಾರೆ ಅಂದರೆ ಸರಿ. ನೋಂದಣಿ ಅಧಿಕಾರಿಗಳು ನೋಂದಣಿ ಕಾಲಕ್ಕೆ ವ್ಯಕ್ತಿಗಳ ಮನಾಸಿಕ ಆರೋಗ್ಯ ಸರಿ ಇರುವ ಬಗ್ಗೆ ವೈಧ್ಯಕೀಯ ದಾಖಲೆ ಪಡೆದುಕೊಂಡೆ ಸದರಿ ದಾಖಲೆ ನೋಂದಣಿ ಮಾಡುತ್ತಾರೆ ಅಂದರೆ ಗೊತ್ತಿಲ್ಲ. ನಮಗೆ 7-8 ತಿಂಗಳ ನಂತರ ಗೊತ್ತಾಯಿತು. ನಮ್ಮ ತಾಯಿ ತನ್ನ ಸ್ವಂತ ಆಸ್ತಿಯನ್ನು ಮೊಮ್ಮಕ್ಕಳ ಪ್ರೀತಿಯಿಂದ ಬಕ್ಷಿಸ ಪತ್ರದ ಮೂಲಕ ಕಾನೂನುಬದ್ಧವಾಗಿ ಕೊಟ್ಟಿರುತ್ತಾರೆ ಅಂದರೆ ಮೋಸದಿಂದ ಮಾಡಿಕೊಂಡಿರುತ್ತಾರೆಂದು ಹೇಳುತ್ತಾರೆ.

13. ನಮ್ಮ ತಾಯಿ ಬಕ್ಷಿಸ ಪತ್ರವಾಗಿ 2 ವರ್ಷಗಳ ನಂತರ ಮರಣ ಹೊಂದಿರುತ್ತಾರೆ ಅಂದರೆ ಸರಿ. ನಮ್ಮ ತಾಯಿಗೆ ಚಿಕಿತ್ಸೆ ಕೊಡಿಸಿದ ನಂತರ 6-7 ತಿಂಗಳ ಚೆನ್ನಾಗಿದ್ದರು ಅಂದರೆ ಸರಿಯಲ್ಲ. ನಮ್ಮ ತಂದೆಗೆ, ಮಗ ಹಾಗೂ ಮಗನ ಮಕ್ಕಳ ಮೇಲೆ ಪ್ರೀತಿ ಇತ್ತು ಅಂದರೆ ಸರಿ. ಸಿದ್ದಾರ್ಥ ನಮ್ಮ ತಾಯಿ ಹಾಗೂ ತಂದೆ ಮರಣ ಹೊಂದುವ ಕಾಲಕ್ಕೆ ಬಾಂಬೆಯಿಂದ ಬಂದ ಯಾವುದೇ ಕೆಲಸ ಮಾಡುತ್ತಿರಲಿಲ್ಲ. ನಮ್ಮ ತಂದೆ ದಿಃ 12.7.2019 ರಂದು ಮರಣ ಹೊಂದಿದರು ಅಂದರೆ ಸರಿ. ನಮ್ಮ ತಂದೆಗೆ ಶುಗರ, ಬಿ ಪಿ ಹಾಗೂ ಕಾಲು ನೋವು ಇತ್ತು. ನಮ್ಮ ತಂದೆ ಮರಣ ಹೊಂದುವ 5-6 ತಿಂಗಳ ಮುಂಚೆ ಬಚ್ಚಲಿನಲ್ಲಿ ಬಿದ್ದು, ಪ್ರಷ್ಟ ಭಾಗದ ಚಪ್ಪೆ ಮುರಿದಿತ್ತು ಅಂದರೆ ಸರಿ. ಅವರಿಗೆ ಓಡಾಡಲು ಬರಲಿಲ್ಲ, ಮಂಕಾದರು ಅಂದರೆ ಸರಿ. ಬೀಳುವದಕ್ಕಿಂತ ಮುಂಚೆ ಚೆನ್ನಾಗಿದ್ದರು ಅಂದರೆ ಸರಿ. ನಮ್ಮ ತಂದೆ ಮರಣ ಹೊಂದವದಕ್ಕಿಂತ 5 ವರ್ಷ ಮುಂಚೆ ದಿಃ 18.09.2014 ರಂದು ವಿಲ್ ಮಾಡಿದ್ದರು ಅಂದರೆ, ಮೋಸದಿಂದ ಮಾಡಿದ್ದಾರೆ. ನಮ್ಮ ತಂದೆ ಹೆಣ್ಣು ಮಕ್ಕಳು ದಾವೆ ಹಾಕಬಹುದೆಂದು ದಿಃ 6.04.2017 ರಂದು ಬೆಳವಟಗಿ ಹೊಲವನ್ನು ಮಗನ ಹೆಸರಿನಲ್ಲಿ ನೋಂದಾದ ಬಕ್ಷಿಸ ಪತ್ರ ಮಾಡಿದರು ಅಂದರೆ ಸರಿ. ನಂತರ ದಿಃ 09.06.2017 ರಂದು ಕೋಟಮುಚಗಿ ರಲ್ಲಿರುವ ಹೊಲವನ್ನು ಮಗನ ಹೆಸರಿನಲ್ಲಿ ನೋಂದಣಿ ಬಕ್ಷಿಸ ಪತ್ರ ಮಾಡಿರುತ್ತಾರೆ ಅಂದರೆ ಸರಿ. ನಮ್ಮ ತಂದೆ ತನ್ನ ಸರ್ಯಾರ್ಜಿತ ಆಸ್ತಿಗಳನ್ನು ಮಗ ಹಾಗೂ ಮಗನ ಮಕ್ಕಳ ಮೇಲಿನ ಪ್ರೀತಿಯಿಂದ ಬಕ್ಷಿಸ ಪತ್ರ ಮಾಡಿರುತ್ತಾರೆ ಅಂದರೆ ಗೊತ್ತಿಲ್ಲ, ಮೋಸದಿಂದ ಮಾಡಿರುತ್ತಾರೆ. ವಿಲ್ ಹಾಗೂ ಬಕ್ಷಿಸ ಪತ್ರಗಳ ನೋಂದಣಿ ಕಾಲಕ್ಕೆ ನಮ್ಮ ತಂದೆ ಆರೋಗ್ಯವಾಗಿದ್ದರು ಅಂದರೆ ಸರಿ.

**O.S. 369-19** **PW : 1**

ವಿಲ್ ಹಾಗೂ ಬಕ್ಷಿಸ ಪತ್ರಗಳ ಮೋಸದಿಂದ ಮಾಡುವಂತಹ ಪರಿಸ್ಥಿತಿ ಇರಲಿಲ್ಲ ಅಂದರೆ ಸರಿಯಲ್ಲ.

14. ದಾವಾ ಆಸ್ತಿಗಳ ಬಗ್ಗೆ ನನಗೇನು ಗೊತ್ತಿಲ್ಲ ಅಂದರೆ ಸರಿಯಲ್ಲ. ದಾವಾ ಆಸ್ತಿಗಳು ನಮ್ಮ ತಂದೆಯ ಪಾಟೀ ಸವಾಲಿನಲ್ಲಿ ಹೇಳುವ ಪ್ರಕಾರ ಪಿತ್ರಾರ್ಜಿತ ಆಸ್ತಿಗಳೆಂದರೆ ಸರಿಯಲ್ಲ. ಅಸಲು ದಾವೆ ನಂಃ 73/11 ರಲ್ಲಿ ಇದೇ ನ್ಯಾಯಾಲಯದಲ್ಲಿ ನಮ್ಮ ತಂದೆಯ ಸ್ವಯಾರ್ಜಿತ ಆಸ್ತಿಗಳೆಂದು ತೀರ್ಮಾನವಾಗಿತ್ತು ಅಂದರೆ ಸರಿಯಲ್ಲ. ದಾವಾ ಆಸ್ತಿಗಳನ್ನು ಆ ದಾವೆಯಲ್ಲಿ ಪಾಲು ಕೇಳಲು ಬರುತ್ತಿತ್ತು ಅಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ನಮ್ಮದು ಯಾವುದೇ ಹಕ್ಕು ಇಲ್ಲದಿದ್ದರೂ ಸಹ ಪ್ರತಿವಾದಿಗಳಿಗೆ ತೊಂದರೆ ಕೊಡಲು ಸುಳ್ಳು ದಾವೆ ಸಲ್ಲಿಸಿದ್ದೇವೆ ಅಂದರೆ ಸರಿಯಲ್ಲ. ನಮ್ಮ ತಾಯಿ ಆಸ್ತಿ ಕೇಳುತ್ತಿದ್ದೇವೆ. ಸಿದ್ದಾರ್ಥನ ಹೆಂಡತಿ ಮಕ್ಕಳು ತಬ್ಬಲಿಯಾಗಿದ್ದರಿಂದ ದಾವೆ ಹೂಡಿ ರಾಜಿ ಸಂಧಾನ ಮೂಲಕ ಏನಾದರೂ ಹಣ ಪಡೆಯಬಹುದೆಂದು ಈ ದಾವೆ ಸಲ್ಲಿಸಿದ್ದೇವೆ ಅಂದರೆ ಸರಿಯಲ್ಲ. ರಾಜಿ ಸಂಧಾನ ಮಾಡಿದ್ದೆವು ಆದರೆ ಆಗಲಿಲ್ಲ. ವಾದ ಪತ್ರ ಹಾಗೂ ಪ್ರಮಾಣ ಪತ್ರದಲ್ಲಿ ಸುಳ್ಳು ವಿಷಯ ಹೇಳಿದ್ದೇವೆ ಅಂದರೆ ಸರಿಯಲ್ಲ. ವಿಲ್ ಹಾಗೂ 3 ಬಕ್ಷಿಸ ಪತ್ರಗಳು ಕಾನೂನುಬದ್ಧವಾಗಿವೆ ಅಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲಾ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೆ.ಸ.ಎ. ಒಪ್ಪಿಕೊಳ್ಳಲಾಯಿತು.

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಹಾಗೂ ಜೆ ಎಂ ಎಫ್ ಸಿ, ಹುಬ್ಬಳ್ಳಿ.